# ಸೂರ್ಯಾರಾಧನೆ

ಶಿಶಿರ ಋತುವಿನಲ್ಲಿ ಬರುವ ಹಬ್ಬಗಳಲ್ಲಿ ರಥಸಪ್ತಮಿ ವಿಶೇಷವಾದ ಹಬ್ಬ, ಅಂದು ಸೂರ್ಯದೇವನ ಆರಾಧನೆ ನಡೆಯುತ್ತದೆ. ಅಂದ ಹಾಗೆ ಫೆಬ್ರುವರಿ 17ರಂದು ರಥಸಪ್ತಮಿ.

■ ಚಿತ್ರ-ಲೇಖನ: ಬಿ.ಎಸ್. ರಾಜಲಕ್ಷ್ಮಿ

ಮಾಘ ಮಾಸದ ಶುಕ್ಲಪಕ್ಷದಲ್ಲಿ ಸಪ್ತಮಿಯಂದು ವಿಶೇಷವಾಗಿ ಸೂರ್ಯದೇವನ ಆರಾಧನೆ. ಶಿಶಿರ ಋತುವಿನಲ್ಲಿ ಬರುವ ಹಬ್ಬಗಳಲ್ಲಿ ರಥಸಪ್ತಮಿ ವಿಶೇಷವಾದ ಹಬ್ಬ, ಅಂದು ಸೂರ್ಯದೇವನ ಜನ್ಮದಿನ ಎಂಬುದು ನಂಬಿಕೆ.

ಸೂರ್ಯನಾರಾಯಣನು ಉತ್ತರಾಯಣನಾಗಿ ಸಪ್ತಾಶ್ವಗಳ ರಥವನ್ನೇರಿ ಉತ್ತರ ದಿಕ್ಕಿನ ಕಡೆಗೆ ಪ್ರಯಾಣ ಹೊರಟ ದಿನ. ಸೂರ್ಯದೇವನ ಆರಾಧನೆಯಿಂದ ಸಕಲ ಇಷ್ಟಾರ್ಥವು ಸಿದ್ಧಿಯಾಗುವುದು.

ದೇಹದಲ್ಲಿ ಮನೆ ಮಾಡಿರುವ ರೋಗಾಣುಗಳನ್ನು ನಾಶಪಡಿಸುವ ಶಕ್ತಿ ಸೂರ್ಯನ ಕಿರಣಗಳಲ್ಲಿವೆ. ಮುಂಜಾನೆ ಹಾಗೂ ಸಂಜೆಯ ಸೂರ್ಯಕಿರಣಗಳು ನಮ್ಮ ದೇಹದ ಮೇಲೆ ಬೀಳುವುದರಿಂದ ಆರೋಗ್ಯ ವೃದ್ಧಿಯಾಗುತ್ತದೆ. ನರ ನಾಡಿಗಳಿಗೆ ಶಕ್ತಿ ಉಂಟಾಗುತ್ತದೆ.

ರಥಸಪ್ತಮಿಯಂದು ಸೂರ್ಯೋದಯಕ್ಕೆ ಸರಿಯಾಗಿ ಪವಿತ್ರ ಕ್ಷೇತ್ರಗಳಲ್ಲಿ ಸ್ನಾನ ಮಾಡಿ, ಸೂರ್ಯನಿಗೆ ಅರ್ಘ್ಯ ನೀಡಿದರೆ ಪೂರ್ವ ಜನ್ಮದ ಪಾಪಗಳು ಪರಿಹಾರವಾಗಿ ಆಯಸ್ಸು, ಆರೋಗ್ಯ, ಸಂಪತ್ತು ಲಭಿಸುವುದು. ಸೂರ್ಯನ ಅನುಗ್ರಹ ಪ್ರಾಪ್ತಿಯಾಗುವುದು ಎಂಬುದು ನಂಬಿಕೆ.

ಜನ್ಮ ಕುಂಡಲಿಯಲ್ಲಿ ಸೂರ್ಯನು ಬಲಹೀನನಾಗಿದ್ದರೆ ರಥಸಪ್ತಮಿಯಂದು ಸೂರ್ಯಾರಾಧನೆ ಮಾಡುವುದರಿಂದ ಪರಿಹಾರ ವಾಗುತ್ತದೆ ಎನ್ನುವುದು ಇನ್ನೊಂದು ನಂಬಿಕೆ.

ಮಕರ ಸಂಕ್ರಾಂತಿಯಂದು ಯಾವುದಾದರೂ ಅಡ್ಡಿ ಆತಂಕಗಳು ಬಂದು ಹಬ್ಬವನ್ನು ಆಚರಿಸಲಾಗದಿದ್ದಲ್ಲಿ ರಥಸಪ್ತಮಿಯಂದು ಪೂಜಿಸಿ ಎಳ್ಳನ್ನು ದಾನ ಮಾಡುತ್ತಾರೆ.

ತುಳಸಿ ಕಟ್ಟೆಯ ಮುಂದೆ ರಂಗವಲ್ಲಿಯಿಂದ ಸೂರ್ಯನ ರಥ ಬರೆದು ಪೂಜಿಸುತ್ತಾರೆ. ದೊಡ್ಡ ಕುಡಿಕೆಯಲ್ಲಿ ಹಾಲನ್ನು ಉಕ್ಕಿಸಿ ಅದರಿಂದ ಪಾಯಸವನ್ನು ಮಾಡಿ ಸೂರ್ಯನಾರಾಯಣನಿಗೆ ನೈವೇದ್ಯ ಮಾಡುತ್ತಾರೆ.

ರಥಸಪ್ತಮಿಯಂದು ಎಕ್ಕದ ಎಲೆಯನ್ನು ಭುಜದ ಮೇಲೆ ಇಟ್ಟುಕೊಂಡು ಸ್ನಾನ ಮಾಡುವ ಪದ್ಧತಿ ನಡೆದು ಬಂದಿದೆ. ಹೀಗೆ ಮಾಡುವುದರಿಂದ ಯಾವುದೇ ರೀತಿಯ ಚರ್ಮವ್ಯಾಧಿಗಳಿದ್ದರೂ ಗುಣವಾಗುವುದು ಎಂಬ ನಂಬಿಕೆ ಬಹಳ ಹಿಂದಿನಿಂದಲೂ ಇದೆ. ಆಚರಣೆ ಈಗಲೂ ನಡೆದು ಬಂದಿದೆ.

ಸೂರ್ಯೋದಯಕ್ಕೆ ಮುಂಚಿತವಾಗಿ ದೈನಂದಿನ ಕೆಲಸಗಳನ್ನು ಮುಗಿಸಿ ಸೂರ್ಯ ನಮಸ್ಕಾರ ಮಾಡುವುದರಿಂದ ಮನುಷ್ಯನು ಹೆಚ್ಚು ಕ್ರಿಯಾಶೀಲನಾಗುತ್ತಾನೆ. ಸೂರ್ಯನ ಪ್ರಖರ ಅತಿನೇರಳೆ ಕಿರಣಗಳಲ್ಲಿಯ ವಿಕಿರಣತೆ ಬೆಳಿಗ್ಗೆ ಕಡಿಮೆ ಪ್ರಮಾಣದಲ್ಲಿರುತ್ತದೆ. ಜೊತೆಗೆ ಇದನ್ನು ಸರಿದೂಗಿಸಲು ನಮ್ಮ ದೇಹದಲ್ಲಿರುವ ಡಿ.ಎನ್.ಎ. ಪ್ರಮಾಣ ಬೆಳಿಗ್ಗೆ ಹೆಚ್ಚಿರುತ್ತದೆ. ಎಳೆ ಬಿಸಿಲಿಗೆ ನಮ್ಮ ಶರೀರವನ್ನು ಒಡ್ಡುವುದರಿಂದ ಚರ್ಮರೋಗಗಳು ನಿವಾರಣೆಯಾಗುತ್ತದೆ. ಕಣ್ಣು ಕಾಂತಿ ಪಡೆಯುತ್ತದೆ, ಅಂಗಾಂಗಗಳು ಕ್ರಿಯಾಶೀಲಗೊಳ್ಳುತ್ತವೆ. ರಥಸಪ್ತಮಿ ಸೂರ್ಯಾರಾಧನೆ ಆಚರಣೆಯಲ್ಲಿ ವೈಜ್ಞಾನಿಕ ಸತ್ಯವೂ ಅಡಗಿದೆ. ಆಯಸ್ಸು, ಆರೋಗ್ಯ, ಸಂಪತ್ತು ಅನುಗ್ರಹಿಸುವ ಸೂರ್ಯಾರಾಧನೆ ವಿಹಿತವಾದದ್ದು. ■



